ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.,
ನ್ಯಾಯಾಲಯ, ಚಿಕ್ಕಮಗಳೂರು.

ಸಿ.ಸಿ.85/2022

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಭೈರೇಗೌಡ | ಪಿ.ಡಬ್ಲ್ಯೂ.4 |
| ತಂದೆಯ ಹೆಸರು | : | ಸಿದ್ದಪ್ಪ | ಸಿ.ಡಬ್ಲ್ಯೂ.14 |
| ವಯಸ್ಸು | : | 64 ವರ್ಷ | |
| ವೃತ್ತಿ | : | ನಿವೃತ್ತ ಎ.ಎಸ್.ಐ, | |
| ವಾಸ | : | ಜ್ಯೋತಿನಗರ, ಚಿಕ್ಕಮಗಳೂರು | |

ದಿನಾಂಕಃ 06-07-2026 ರಂದು ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಅಭಿಯೋಜನೆ ಪರ ಮಾನ್ಯ ಎಪಿಪಿ ರವರಿಂದಃ-

ನಾನು 2016 ರಿಂದ 2022 ರವರೆಗೆ ಚಿಕ್ಕಮಗಳೂರು ಸಂಚಾರಿ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ10.05.2020 ರಂದು ನಾನು ಕರ್ತವ್ಯದಲ್ಲಿ ಇದ್ದಾಗ ಸಂಚಾರಿ ಪೊಲೀಸ್ ಠಾಣೆಯಿಂದ ದೂರವಾಣಿ ಮೂಲಕ ಬೈಪಾಸ್ ರಸ್ತೆಯ ಪುಷ್ಪಗಿರಿ ಪ್ಲೈವುಡ್ ಅಂಗಡಿಯ ಹತ್ತಿರ ಅಪಘಾತವಾಗಿರುತ್ತದೆ ಎಂದು ಮಧ್ಯಾಹ್ನಃ 03.10 ಗಂಟೆಗೆ ತಿಳಿಸಿದ ಮೇರೆಗೆ ನಾನು ಅಲ್ಲಿಗೆ ಹೋಗಿರುತ್ತೇನೆ. ಅಷ್ಟು ಹೊತ್ತಿಗೆ ನಗರ ಪೊಲೀಸ್ ಠಾಣಾ ಪಿ.ಸಿ 79, ತಿಮ್ಮಪ್ಪ ಎನ್ನುವವರು ಸದರಿ ಸ್ಥಳದಲ್ಲಿ ಇದ್ದರು. ಅವರನ್ನು ವಿಚಾರಿಸಲಾಗಿ ಒಂದು ಪಲ್ಸರ್ ಬೈಕ್ ರಸ್ತೆಯಲ್ಲಿ ಅಪಘಾತವಾಗಿ ಬಿದ್ದಿರುತ್ತದೆ ಎಂದು ಹೇಳಿರುತ್ತಾರೆ. ನಂತರ ಸಾರ್ವಜನಿಕರನ್ನು

ವಿಚಾರಿಸಲಾಗಿ 3 ಜನರು ಬೈಕ್ ನಲ್ಲಿ ಹೋಗುತ್ತಿದ್ದು ಸದರಿಯವರಿಗೆ ಪೆಟ್ಟಾಗಿದ್ದು ಖಾಸಗಿ ವಾಹನದಲ್ಲಿ ಎಂ.ಜಿ. ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ತಿಳಿಸಿರುತ್ತಾರೆ. ನಂತರ ದಾರಿಯಲ್ಲಿ ಇದ್ದ ಪಲ್ಸರ್ ಬೈಕ್ ಅನ್ನು ಸಂಚಾರ ಸುಗಮಗೊಳಿಸಲು ಚಾಸಾ-12 ರವರ ಹಸ್ತ ಬೈಕ್ ಅನ್ನು ಠಾಣೆಗೆ ಕಳುಹಿಸಿಕೊಟ್ಟಿರುತ್ತೇನೆ.

ನಂತರ ನಗರ ಠಾಣೆಗೆ ಹೋಗಿ ಅಲ್ಲಿ ಇದ್ದ ಚಾಸಾ-12 ರವರನ್ನು ವಿಚಾರಿಸಲಾಗಿ ಸದರಿಯವರು ಎಂ.ಜಿ. ಆಸ್ಪತ್ರೆಯಲ್ಲಿ ದಾಖಲಾಗಿರುತ್ತಾರೆ ಎಂದು ತಿಳಿಸಿದ ಮೇರೆಗೆ ನಾನು ಮತ್ತು ಚಾಸಾ-12 ರವರು ಆಸ್ಪತ್ರೆಗೆ ಹೋಗಿ ಮಧು ಹಾಗೂ ಪವನ್ ಎನ್ನುವವರು ಚಿಕಿತ್ಸೆಗೆ ದಾಖಲಾಗಿದ್ದು ಸದರಿ ವಿಚಾರವನ್ನು ವೃತ್ತ ನಿರೀಕ್ಷಕರಿಗೆ ತಿಳಿಸಲಾಗಿ ಸದರಿಯವರು ಮಧು ಮತ್ತು ಪವನ್ ರವರಿಗೆ ಚಿಕಿತ್ಸೆ ನೀಡಿದ ನಂತರ ಠಾಣೆಗೆ ಕರೆದುಕೊಂಡು ಬರುವಂತೆ ತಿಳಿಸಿರುತ್ತಾರೆ. ನಂತರ ಸದರಿ 2 ಜನ ಆರೋಪಿತರನ್ನು ಮಧ್ಯಾಹ್ನಃ 03.17 ಗಂಟೆಗೆ ನಮ್ಮ ವಶಕ್ಕೆ ಪಡೆದು ಠಾಣೆಗೆ ಮಧ್ಯಾಹ್ನಃ 03.30 ಗಂಟೆಗೆ ವೃತ್ತ ನಿರೀಕ್ಷಕರ ಮುಂದೆ ಹಾಜರುಪಡಿಸಿರುತ್ತೇವೆ. ನಾನು ಈ ಬಗ್ಗೆ ತನಿಖಾಧಿಕಾರಿಯವರ ಮುಂದೆ ಹೇಳಿಕೆ ನೀಡಿರುತ್ತೇನೆ. ಸದರಿ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. (ಈ ದಿನ ನ್ಯಾಯಾಲಯದ ಮುಂದೆ ಆರೋಪಿತರು ಗೈರು ಹಾಜರಿದ್ದು ಅವರನ್ನು ನೋಡಿ ಗುರುತಿಸುವಲ್ಲಿ ತಮ್ಮ ತಕರಾರು ಇಲ್ಲ ಎಂದು ಆರೋಪಿತರ ಪರ ವಕೀಲರು ತಿಳಿಸಿರುತ್ತಾರೆ).

C.C.No.85/2022
PW-5 CW-14

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ-</u>

ನಾನು ಯಾವುದೇ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಆರೋಪಿತರನ್ನು ವಶಕ್ಕೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತರನ್ನು ವೃತ್ತ ನಿರೀಕ್ಷಕರ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿಯವರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಕೂಡಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಿನ ನಾನು ಯಾವುದೇ ವಾಹನವನ್ನು ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

Sd/-
(ಕುಮಾರಿ ಸುಜಾತ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ